**ಫ್ರಾಸಾ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 02-08-2024 ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

3. ಎರಡು ರಾಸಾಯನಿಕ ಪುಡಿ ತೋರಿಸಿದರು, ಒಂದು ಪಿನಾಪ್ತಲಿನ ಪುಡಿ ಮತ್ತು ಇನ್ನೊಂದು ಸೋಡಿಯಂ ಕಾರ್ಬೋನೇಟ ಎಂದು ತಿಳಿಸಿದರು ಮತ್ತು ಅವುಗಳ ಗುಣಧರ್ಮದ ಬಗ್ಗೆ ತಿಳಿಸಿದರು. ನಂತರ ಪೇದೆ ವಿಜಯಕುಮಾರ ಅವರಿಗೆ ಸದರಿ ನೋಟುಗಳಿಗೆ ಪಿನಾಪ್ತಲಿನ ಪೌಡರನ್ನು ಎರಡೂ ಕಡೆ ಹಚ್ಚುವಂತೆ ಹೇಳಿದರು. ಅವರು ನೋಟುಗಳಿಗೆ ಪಿನಾಪ್ತಲಿನ ಪೌಡರ ಹಚ್ಚಿ ಪಂಚ ಪ್ರವೀಣಕುಮಾರ ಅವರ ಕೈಯಲ್ಲಿ ಕೊಟ್ಟರು. ಸದರಿ ಪ್ರಮೀಣ ಕುಮಾರ ಆ ನೋಟುಗಳನ್ನು ಎರಡೂ ಕೈಗಳಿಂದ ಎಣಿಸಿ ಫಿರ್ಯಾದಿ ಶರ್ಟನ ಎಡಜೇಬಿನಲ್ಲಿ ಏನೂ ಇಲ್ಲ ಎಂದು ಖಾತರಿಪಡಿಸಿಕೊಂಡು ಸದರಿ ಹಣವನ್ನು ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ಎರಡು ಗಾಜಿನ ಬಟ್ಟಲುಗಳನ್ನು ತರಿಸಿ ಸೋಡಿಯಂ ಕಾರ್ಬೋನೇಟ ಧ್ರಾವಣ ತಯಾರಿಸಿದ್ದು ಅದು ಬಣ್ಣ ರಹಿತವಾಗಿತ್ತು ನಂತರ ಪಂಚ ಪ್ರವಿಣಕುಮಾರನ ಕೈ ಬೆರಳುಗಳನ್ನು ಆಧ್ರಾವಣದಲ್ಲಿ ಅದ್ದಿಸಿದರು ಸದರಿ ಕೈ ಬೆರಳುಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಬಣ್ಣ ಬಂದಿದ್ದ ಧ್ರಾವಣವನ್ನು ಬಾಟಲಿಯಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿದರು ನಂತರ ಪಂಚರು ಮತ್ತು ಪಿ.ಐ. ಸಹಿ ಮಾಡಿದ ಚೀಟಿ ಅಂಟಿಸಿರುತ್ತಾರೆ ಅದನ್ನು ಆರ್ಟಿಕಲ್-2 ಎಂದು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರ್ಟಿಕಲ್-2 ನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ. ನಂತರ ರಾಸಾಯನಿಕ ಪ್ರಕ್ರಿಯೇ ಬಗ್ಗೆ ನಮಗೆ ತಿಳಿಸಿದರು. ನಂತರ ಆರ್ಟಿಕಲ್-1, 2 ಮತ್ತು ಪಿನಾಪ್ತಲಿನ ಪುಡಿ ಇರುವ ಡಬ್ಬಿಯನ್ನು ಲೋಕಾಯುಕ್ತ ಕಛೇರಿಯ ಅಲಮಾರದಲ್ಲಿ ಇಟ್ಟು ಬೀಗ ಹಾಕಿದರು. ಪಿಐ ಅವರು ಆರೋಪಿ ಲಂಚದ ಹಣ ಕೇಳಿದಾಗ ಅದನ್ನು ಕೊಡುವಂತೆ ಫಿರ್ಯಾದಿಗೆ ಹೇಳಿದರು. ಆರೋಪಿ ಸದರಿ ಲಂಚದ ಹಣ ಇಂತಹ ಜಾಗದಲ್ಲಿ ಇಡು ಅಥವಾ ಇಂತಹವರಿಗೆ ಕೊಡು ಎಂದು ಹೇಳಿದರೆ ಆ ರೀತಿ ಮಾಡುವಂತೆ ಹೇಳಿದರು. ನಂತರ ಫಿರ್ಯಾದಿಗೆ ಟ್ರ್ಯಾಪ ಆದ ನಂತರ ಕೈಯಿಂದ ಮುಖವನ್ನು ವರಸಿಕೊಳ್ಳುವಂತೆ ಸನ್ನೆ ಮಾಡುವಂತೆ ತಿಳಿಸಿದರು. ನಂತರ ಆರೋಪಿ ಮತ್ತು ಫಿರ್ಯಾದಿಯ ನಡುವೆ ನಡೆದ ಸಂಭಾಷಣೆಯನ್ನು ಧ್ವನಿ ಮುದ್ರಣಮಾಡಿಕೊಂಡು ಬರುವಂತೆ ಪಿಐ ರವರು ಹೇಳಿದರು. ನಂತರ ನನಗೆ ಫಿರ್ಯಾದಿ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ತಿಳಿದುಕೊಳ್ಳುವಂತೆ ಹೇಳಿದರು. ಅಲ್ಲಿ ವಿಡಿಯೋ ಮಾಡಿ ಫೋಟೋಗಳನ್ನು ಸೈಯದ ಸಫಿಯೋದ್ದಿನ ಪೇದೆಯಿಂದ ತೆಗೆಯಿಸಿದರು. ಸದರಿ ಪಂಚನಾಮೆ ದಿಃ 28.02.2015 ರಂದು ಬೆಳಿಗ್ಗೆ 11-45 ರಿಂದ 12-45 ಗಂಟೆಯವರೆಗೆ ಮಾಡಿದರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಅದನ್ನು ನಿ.ಪಿ.18(ಬಿ) ಎಂದು ಗುರುಸಲಾಯಿತು. ಮು.ಮಾ.4 ಮತ್ತು 5 ಸಿ.ಡಿ.ಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.3 ರಿಂದ 17 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

4.	ದಿಃ 28.02.2015 ರಂದು ಮಧ್ಯಾಹ್ನ 1-00 ಗಂಟೆಗೆ ಲೋಕಾಯುಕ್ತ ಕಛೇರಿಯಿಂದ ಒಂದು ಟವೇರಾ ಖಾಸಗಿ ವಾಹನ ಮತ್ತೊಂದು ಇಲಾಖಾ ವಾಹನದಲ್ಲಿ ಹೊರಟೇವು ನಾನು, ಫಿರ್ಯಾದಿ, ತನಿಖಾಧಿಕಾರಿ, ವಿಜಯಕುಮಾರ, ಶ್ರೀನಿವಾಸ, ಖಾಸಗಿ ವಾಹನದಲ್ಲಿ ಇದ್ದೆವು. ಇಲಾಖಾ ವಾಹನದಲ್ಲಿ ಪಂಚ ಸಾಕ್ಷಿ ಪ್ರವಿಣಕುಮಾರ, ಸಫಿಯುದ್ದಿನ ಪೇದೆ, ಮುತ್ತಣ್ಣ ಪೇದೆ ಇದ್ದರು. ಮಧ್ಯಾಹ್ನ 2-00 ಹಸನಾಪೂರ ಗ್ರಾಮಕ್ಕೆ ಹೋದೆವು. ಅಲ್ಲಿ ವಾಹನ ನಿಲ್ಲಿಸಿ ಪಿಐ ರವರು ಫಿರ್ಯದಿಗೆ ಆರೋಪಿಗೆ ಫೋನ್ ಮಾಡುವಂತೆ ಸೂಚಿಸಿದರು. ಪಿಐ ರವರ ಸೂಚನೆಯ ಮೇರೆಗೆ ಫಿರ್ಯಾದಿ ಆರೋಪಿಗೆ ಫೋನ್ ಮಾಡಲಾಗಿ ಆರೋಪಿ ಸಿದ್ದಾಪೂರನಲ್ಲಿ ಇದ್ದು ಅರ್ಧ ಗಂಟೆಯಲ್ಲಿ ಸುರಪೂರಕ್ಕೆ ಬರುತ್ತೇನೆ ಎಂದು ತಿಳಿಸಿದರು. ನಂತರ ಪಿಐ ರವರು ಸೂಚನೆಯಂತೆ ಸುರಪೂರಕ್ಕೆ ಹೊರಟೇವು. ಸುರಪೂರದ ವೆಂಕಟಸ್ವಾಮಿ ಗುಡಿಯ ಹತ್ತಿರ ಹೋಗಿ ಕಾಯ್ದೆ ವು. ಮಧ್ಯಾಹ್ನ 3-30 ಗಂಟೆಗೆ ಆರೋಪಿಯಿಂದ ಫಿರ್ಯಾಧಿಗೆ ಫೋನ್ ಬಂತು. ಆರೋಪಿ ಫೋನ್ ನಲ್ಲಿ ಸಂಜು ಜೂಸ್ ಸೆಂಟರನಲ್ಲಿ ಇದ್ದೇನೆ ಅಲ್ಲಿಗೆ ಬಾ ಎಂದು ಹೇಳಿದರು. ನಾನು ಮತ್ತು ಫಿರ್ಯಾದಿ ಸಂಜು ಜೂಸ್ ಸೆಂಟರನಲ್ಲಿ ಹೋದೆವು. ಆರೋಪಿ ಮತ್ತು ಫಿರ್ಯಾದಿ ಒಂದು ಟೇಬಲನಲ್ಲಿ ಕುಳಿತರು ಮತ್ತೊಂದು ಟೇಬಲನಲ್ಲಿ ನಾನು ಕುಳಿತುಕೊಂಡೆ. ಫಿರ್ಯಾದಿ ಆರೋಪಿ ನೌಕರನಿಗೆ ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ ಆರೋಪಿ ಲಂಚದ ಹಣ ಕೇಳಿದ. ಫಿರ್ಯಾದಿ 3,000/- ರೂಪಾಯಿಗಳನ್ನು ಸರ್ವೆಯರ್ ಮಾಳಪ್ಪ ಅವರ ಕೈಯಲ್ಲಿ ಕೊಟ್ಟುರು ಅವರು ಎರಡೂ ಕೈಗಳಿಂದ ಆ ನೊಟುಗಳನ್ನು ಎಣಿಸಿಕೊಂಡು ತನ್ನ ಶರ್ಟಿನ ಎಡ ಜೇಬಿನಲ್ಲಿ ಇಟ್ಟುಕೊಂಡರು. ಫಿರ್ಯಾದಿ ಎದುಬಂದು ಹೊರಗಡೆ ಇದ್ದ ಲೋಕಾಯುಕ್ತ ಸಿಬ್ಬಂದಿಗೆ ತನ್ನ ಕರವಸ್ತ್ರದಿಂದ ಮುಖ ವರಸಿಕೊಳ್ಳುವಂತೆ ಸನ್ನೆ ಮಾಡಿದನು. ಆಗ ಪಿಐ ಮತ್ತು ಇತರೆ ಸಿಬ್ಬಂದಿಗಳು ಮತ್ತು ಪಂಚ ಪ್ರವಿಣಕುಮಾರ ಎಲ್ಲರು ಬಂದರು. ಪೇದೆ ವಿಜಯಕುಮಾರ ಮತ್ತು ಶ್ರಿನೀವಾಸ ಇವರು ಆರೋಪಿಯ ಎರಡು ಕೈಗಳನ್ನು ಹಿಡಿದರು. ಫಿರ್ಯಾದಿ ಆರೋಪಿ ಮಾಳಪ್ಪನನ್ನು ತೋರಿಸಿ ಲಂಚದ ಹಣ 3,000/- ರೂಪಾಯಿ ಕೊಟ್ಟಿದ್ದೇನೆ ಎಂದು ಹೇಳಿದರು. ಪಿಐ ರವರು ಆರೋಪಿಗೆ ಪರಿಚಯ ಮಾಡಿಕೊಂಡರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಗೆ ಲಂಚದ ಹಣದ ವಿಷಯದಲ್ಲಿ ಟ್ರ್ಯಾಪ ಮಾಡಿರುತ್ತೇವೆ ಎಂದು ತಿಳಿಸಿದರು. ಫಿರ್ಯಾದಿ ಮತ್ತು ನನಗೆ ಘಟನೆಯ ಬಗ್ಗೆ ಕೇಳಿದಾಗ ಸಂಜು ಜೂಸ್ ಸೆಂಟರಗೆ ಬಂದು ಕೆಲಸದ ಬಗ್ಗೆ ವಿಚಾರಿಸಿದಾಗ ಹಣವನ್ನು ಕೇಳಿದ್ದು ಎಲ್ಲಾದರೂ ಅಷ್ಟೆ ಕೊಡುವದು ಇಲೇ ಕೊಡು ಎಂದಾಗ 3,000/- ರೂಪಾಯಿ ಹಣವನ್ನು ಆರೋಪಿಗೆ ಫಿರ್ಯಾದಿಗೆ ಕೊಟ್ಟರು. ನಂತರ ಪೊಲೀಸರಿಗೆ ಸನ್ನೆ ಮಾಡಿದರು ಎಂದು ತಿಳಿಸಿದರು. ನಂತರ ಪಿಐ ರವರು ಸಿಬ್ಬಂದಿಗೆ ಸೋಡಿಯಂ ಕಾರ್ಬೋನೇಟ ಬಣ್ಣ ರಹಿತವಾದ ದ್ರಾವಣ ತಯಾರಿಸಲು ತಿಳಿಸಿದರು. ಸಿಬ್ಬಂದಿ ದ್ರಾವಣ ತಯಾರಿಸಿದರು. ಅದು ಆರ್ಟಿಕಲ್-3 ಮತ್ತು 3(ಎ) ಆಗಿದ್ದು ಅದನ್ನು ಈಗಾಗಲೇ ಮು.ಮಾ.6 ಮತ್ತು 7 ಎಂದು ಗುರುತಿಸಲಾಗಿದೆ. ಸದರಿ ದ್ರಾವಣದಲ್ಲಿ ಮಾಳಪ್ಪ

ಅವರ ಬಲಗೈ  ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅದು ಆರ್ಟಿಕಲ್-4, 4(ಎ) ಆಗಿದ್ದು ಅದನ್ನು  ಈಗಾಗಲೇ ಮು.ಮಾ.8 ಮತ್ತು 9 ಎಂದು ಗುರುತಿಸಲಾಗಿದೆ. ಮಾಳಪ್ಪ ಅವರ ಎಡಗೈ  ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅದು ಆರ್ಟಿಕಲ್-5, 5(ಎ) ಆಗಿದ್ದು ಅದನ್ನು  ಈಗಾಗಲೇ ಮು.ಮಾ.10 ಮತ್ತು 11 ಎಂದು ಗುರುತಿಸಲಾಗಿದೆ. ಆರೋಪಿಯ ಜೇಬಿನಲ್ಲಿ ಇದ್ದ ನೋಟುಗಳನ್ನು ನನಗೆ ತೆಗೆಯುವಂತೆ ಸೂಚಿಸಿದರು. ನಾನು ಆ ನೋಟುಗಳನ್ನು ತೆಗೆದು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ಕೈಯಲ್ಲಿ ಕೊಟ್ಟಿದ್ದು ಅವರು ಸದರಿ ನೋಟುಗಳು ಲೋಕಾಯುಕ್ತ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದುಕೊಂಡ ನೋಟುಗಳು ಅವೆ ಇರುತ್ತವೆ ಎಂದು ತಿಳಿಸಿದರು. ಆ ಹಣವನ್ನು ಹೊಂದಾಣಿಕೆ ಮಾಡಿ ನೋಡಿದಾಗ ಆ ನಂಬರಗಳು ಅವೇ ಇದ್ದು ಆ ಬಗ್ಗೆ ನಿ.ಪಿ.29 ರಲ್ಲಿ ನಮೂದು ಮಾಡಿದ್ದು ಸಾಕ್ಷಿಯ ಸಹಿಗಳನ್ನು ನಿ.ಪಿ.29(ಬಿ) ಮತ್ತು ನಿ.ಪಿ.29(ಸಿ) ಎಂದು ಗುರುತಿಸಲಾಯಿತು. ಮು.ಮಾ.1ನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾ.1ನ್ನು ಈಗಾಗಲೇ ಗುರುಸಲಾಗಿದೆ. ಕವರನ್ನು ನೋಡಿದರೆ ಗುರುತಿಸುತ್ತೇನೆ. ಸಂಜು ಜೂಸ್ ಸೆಂಟರನಲ್ಲಿ ಬಹಳ ಗದ್ದಲ ಇದುದ್ದರಿಂದ ಅಲ್ಲಿಂದ  ಸರ್ವೆ ಕಛೇರಿಗೆ ಹೋದೆವು. ಅಲ್ಲಿ ಮಾಳಪ್ಪ ಎಂಬುವವರನ್ನು ವಿಚಾರಿಸಿದಾಗ ಸಿದ್ದರಾಜು ಅವರು ಸಾಹೇಬರು ಯಾದಗಿರಿಯ ಕಛೇರಿಗೆ ಹೋಗಿದ್ದಾರೆ ಎಂದು ಹೇಳಿದರು. ನರೇಶಕುಮಾರ ಅವರಿಗೆ ಆರೋಪಿಯ ದಸ್ತಗಿರಿ ನೊಟೀಸನ್ನು ಪಿಐ ರವರು  ಜಾರಿ ಮಾಡಿದರು. ಅಲ್ಲಿಂದ ಲೋಕಾಯುಕ್ತ ಕಛೇರಿಗೆ ವಾಪಾಸ ಬಂದೆವು.

ಸರಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.